

بسم اللهِ الرّحمٰنِ الرّحيم

# ಹಝ್ರತ್ ಪೈಗಂಬರ್(ಸ)ರ ದಾನಶೀಲತೆಯ ಸುಂದರ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19–06–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ದಾನಶೀಲತೆಗೆ ಸಂಬಂಧಿಸಿದಂತೆ ಕೆಲವು ವರದಿಗಳನ್ನು ಪ್ರಸ್ತುತಪಡಿಸುತ್ತೇನೆ.

ಒಂದು ವರದಿಯಲ್ಲಿ ಹಝ್ರತ್ ಅಬೂ ಸಈದ್ ಖುದ್ರಿ(ರ) ವಿವರಿಸುತ್ತಾರೆ: ಅನ್ಸಾರ್‌ರ ಕೆಲವು ಜನರು ರಸೂಲುಲ್ಲಾಹ್(ಸ)ರೊಡನೆ ದಾನ ಕೇಳಿದರು. ಹಝ್ರತ್ ಪೈಗಂಬರ್(ಸ) ಅವರಿಗೆ ನೀಡಿದರು. ಅವರು ಪುನಃ ಬೇಡಿದರು ಮತ್ತು ಹಝ್ರತ್ ಪೈಗಂಬರ್(ಸ) ಪುನಃ ನೀಡಿದರು. ಅವರು ಪುನಃ ಬೇಡಿದರು ಮತ್ತು ಹಝ್ರತ್ ಪೈಗಂಬರ್(ಸ) ಮತ್ತೆ ನೀಡಿದರು; ಕೊನೆಗೆ ಹಝ್ರತ್ ಪೈಗಂಬರ್(ಸ)ರ ಬಳಿ ಇದ್ದದ್ದೆಲ್ಲವೂ ಮುಗಿದುಹೋಯಿತು. ಆಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: 'ನನ್ನ ಬಳಿ ಇರುವ ಸಂಪತ್ತನ್ನು ನಾನು ಎಂದಿಗೂ ನಿಮ್ಮಿಂದ ಮುಚ್ಚಿಡಲಾರೆ. ಭಿಕ್ಷೆ ಬೇಡುವುದರಿಂದ ದೂರವಿರುವವನನ್ನು ಅಲ್ಲಾಹನು ಸಹ ಕಾಪಾಡುತ್ತಾನೆ. ಯಾರು ಐಹಿಕ ಸಂಪತ್ತನ್ನು ಬಯಸುವುದಿಲ್ಲವೋ ಅಲ್ಲಾಹನು ಅವನನ್ನು ಸ್ವಾವಲಂಬಿಯನ್ನಾಗಿ ಮಾಡುವನು. ಯಾರು ತನ್ನ ಮನಸ್ಸಿನ ಮೇಲೆ ನಿಯಂತ್ರಣವಿಟ್ಟು ತಾಳ್ಮೆ ವಹಿಸುತ್ತಾನೋ, ಅಲ್ಲಾಹನು ಅವನಿಗೆ ತಾಳ್ಮೆಯನ್ನು ಕರುಣಿಸುತ್ತಾನೆ. ತಾಳ್ಮೆಗಿಂತ ಶ್ರೇಷ್ಠ ಹಾಗೂ ವಿಶಾಲವಾದ ಬೇರೆ ಯಾವುದೇ ಅನುಗ್ರಹ ಯಾರಿಗೂ ನೀಡಲಾಗಿಲ್ಲ.'

ಹಝ್ರತ್ ಇಬ್ನು ಉಮರ್(ರ) ವಿವರಿಸುತ್ತಾರೆ: ನಾವು ಹಝ್ರತ್ ಪೈಗಂಬರ್(ಸ)ರ ಜೊತೆ ಒಂದು ಪ್ರಯಾಣದಲ್ಲಿದ್ದೆವು. ನಾನು ಒಂದು ಹಠಮಾರಿ ಒಂಟೆಯ ಮೇಲೆ ಸವಾರನಾಗಿದ್ದೆ, ಅದು ಇತರ ಸವಾರಿಗಳಿಗಿಂತ ಮುಂದೆ ಸಾಗುತ್ತಿತ್ತು. ಹಝ್ರತ್ ಉಮರ್(ರ) ಅದನ್ನು ತಡೆಯುತ್ತಿದ್ದರು ಮತ್ತು ಗದರಿಸುತ್ತಿದ್ದರು. ಇದನ್ನು ಕಂಡು ರಸೂಲುಲ್ಲಾಹ್(ಸ) ಹೇಳಿದರು: 'ಈ ಒಂಟೆಯನ್ನು ನನಗೆ ಬೆಲೆ ನಿಗದಿಪಡಿಸಿ ಕೊಟ್ಟುಬಿಡಿ'. ಹಝ್ರತ್ ಉಮರ್(ರ) ಹೇಳಿದರು: 'ಇದು ನಿಮ್ಮದೇ ಆಗಿದೆ' ರಸೂಲುಲ್ಲಾಹ್(ಸ) ಹೇಳಿದರು: 'ಇದನ್ನು ನನಗೆ ಮಾರಾಟ ಮಾಡು'. ಹಾಗೆ ಅವರು ಆ ಒಂಟೆಯನ್ನು ಹಝ್ರತ್ ಪೈಗಂಬರ್(ಸ)ರಿಗೆ ಮಾರಾಟ ಮಾಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: 'ಹೇ ಅಬ್ದುಲ್ಲಾಹ್ ಬಿನ್ ಉಮರ್, ಈಗ ಈ ಒಂಟೆ ನಿನ್ನದು. ಈಗ ನೀನು ಬಯಸುವುದನ್ನು ಮಾಡು'

(ಹುಝೂರ್ ಹೇಳಿದರು:) ಉಡುಗೊರೆ ಕೊಡುವುದಕ್ಕೂ ಒಂದು ರೀತಿಯಿದೆ. ಹಝ್ರತ್ ಪೈಗಂಬರ್(ಸ) ಈ ಮೂಲಕ ಮನವರಿಕೆ ಮಾಡಿಸಿದ್ದೇನೆಂದರೆ, ಅದೊಂದು ಜಾನುವಾರು ಆಗಿದೆ, ಅದು ಇತರ ಸವಾರಿಗಳಿಗಿಂತ ಮುಂದೆ ಹೋದರೆ ಯಾವುದೇ ತಪ್ಪಿಲ್ಲ. ಈಗಂತೂ ಆ ಒಂಟೆಯನ್ನು ರಸೂಲುಲ್ಲಾಹ್(ಸ) ಖರೀದಿಸಿದ್ದಾರೆ, ಆದ್ದರಿಂದ ಅದು ಇತರ ಸವಾರಿಗಳಿಗಿಂತ ಮುಂದೆ ಹೋದರೂ ಪ್ರವಾದಿಯವರ ಒಂಟೆಯೇ ಮುಂದೆ ಸಾಗಿದೆ' ಎಂದು ಹೇಳಲಾಗುವುದು.

ಒಂದು ಯುದ್ಧದ ಸಂದರ್ಭದಲ್ಲಿ ಹಝ್ರತ್ ಜಾಬಿರ್(ರ)ರ ಒಂಟೆಗೆ ಸುಸ್ತಾಯಿತು ಮತ್ತು ನಡೆಯುವಲ್ಲಿ ಮಂದಗತಿಯಾಯಿತು, ಇದರಿಂದಾಗಿ ಅವರು ಸೈನ್ಯದಿಂದ ಹಿಂದೆ ಉಳಿದರು. ರಸೂಲುಲ್ಲಾಹ್(ಸ) ಅವರ ಬಳಿಗೆ ಬಂದು ಕ್ಷೇಮ ಸಮಾಚಾರ ವಿಚಾರಿಸಿದರು. ಜಾಬಿರ್(ರ) ಒಂಟೆಯ ಸುಸ್ತಿನ ಬಗ್ಗೆ ಪ್ರಸ್ತಾಪಿಸಿದರು. ಹಝ್ರತ್ ಪೈಗಂಬರ್(ಸ) ತಮ್ಮ ಚಾವಟಿಯಿಂದ ಒಂಟೆಯನ್ನು ತಟ್ಟಿ, 'ಈಗ ಇದರ ಮೇಲೆ ಸವಾರನಾಗು' ಎಂದು ಹೇಳಿದರು. ಜಾಬಿರ್(ರ) ಹೇಳುತ್ತಾರೆ: ನಾನು ಸವಾರನಾದೆ ಮತ್ತು ಅದು ಎಷ್ಟೊಂದು ವೇಗವಾಯಿತೆಂದರೆ ರಸೂಲುಲ್ಲಾಹ್(ಸ)ರ ಸವಾರಿಗಿಂತಲೂ ಮುಂದೆ ಸಾಗಲಾರಂಭಿಸಿತು, ಆಗ ನನಗೆ ಅದನ್ನು ತಡೆಯಬೇಕಾಗಿ ಬಂತು. ಅನಂತರ ಹಝ್ರತ್ ಪೈಗಂಬರ್(ಸ) ನನ್ನೊಡನೆ, 'ನೀನು ಮದುವೆ ಮಾಡಿಕೊಂಡಿದ್ದೀಯಾ?' ಎಂದು ವಿಚಾರಿಸಿದರು. 'ಹೌದು' ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: 'ನೋಡು, ನೀನು ನಿನ್ನ ಮನೆಗೆ ಮುಟ್ಟುತ್ತಿದ್ದೀಯಾ, ಮನೆಗೆ ತಲುಪಿದರೆ ವಿವೇಕದಿಂದ,

ಎಚ್ಚರಿಕೆಯಿಂದ ನಡೆದುಕೋ. ಮನೆಯಲ್ಲಿ ಉತ್ತಮವಾಗಿ ವರ್ತಿಸಬೇಕು.' ಅನಂತರ ಹಝ್ರತ್ ಪೈಗಂಬರ್(ಸ) ಕೇಳಿದರು: 'ನೀನು ನಿನ್ನ ಈ ಒಂಟೆಯನ್ನು ನನಗೆ ಮಾರುತ್ತೀಯಾ?' ಆಗಬಹುದು ಎಂದು ನಾನು ಹೇಳಿದಾಗ ಅವರು ಅದನ್ನು ನನ್ನಿಂದ ಒಂದು ಔಖಿಯಾ ಬೆಳ್ಳಿಗೆ ಖರೀದಿಸಿದರು. ಅನಂತರ ರಸೂಲುಲ್ಲಾಹ್(ಸ) ನನಗಿಂತ ಮೊದಲು ಮದೀನಾ ತಲುಪಿದರು. ನಾನು ಮರುದಿನ ಬೆಳಗ್ಗೆ ತಲುಪಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: 'ನಿನ್ನ ಒಂಟೆಯನ್ನು ಇಲ್ಲಿಯೇ ಬಿಡು ಮತ್ತು ಮಸೀದಿಗೆ ಹೋಗಿ ಎರಡು ರಕಅತ್ ನಮಾಝ್ ನಿರ್ವಹಿಸು.' ಅದರಂತೆ ನಾನು ಒಳಗೆ ಹೋಗಿ ನಮಾಝ್ ನಿರ್ವಹಿಸಿದೆ. ಹಝ್ರತ್ ಬಿಲಾಲ್(ರ)ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: 'ಇವರಿಗೆ ಒಂದು ಔಖಿಯಾ ಬೆಳ್ಳಿಯನ್ನು ತೂಕ ಮಾಡಿ ಕೊಡು'. ಹಝ್ರತ್ ಬಿಲಾಲ್(ರ) ತೂಕ ಮಾಡುವಾಗ ತಕ್ಕಡಿಯನ್ನು ತಗ್ಗಿಸಿದರು, ಅಂದರೆ ಸ್ವಲ್ಪ ಹೆಚ್ಚು ತೂಕದ ಬೆಳ್ಳಿಯನ್ನು ನೀಡಿದರು. ಅನಂತರ ನಾನು ಅಲ್ಲಿಂದ ಹಿಂತಿರುಗಿದೆ. 'ಜಾಬಿರ್‌ನನ್ನು ನನ್ನ ಬಳಿಗೆ ಕರೆಯಿರಿ' ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಅವರು ಬಂದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ನಿನ್ನ ಒಂಟೆಯನ್ನು ನೀನೇ ಇಟ್ಟುಕೋ ಮತ್ತು ಅದರ ಬೆಲೆಯೂ ನಿನ್ನದೇ ಆಗಿದೆ'. ಹಝ್ರತ್ ಪೈಗಂಬರ್(ಸ) ನೀಡಿದ ಈ ಉಡುಗೊರೆಯಲ್ಲಿ ಎಷ್ಟೊಂದು ಅನುಗ್ರಹ ಉಂಟಾಯಿತೆಂದರೆ, ಆ ಒಂಟೆ ಹಝ್ರತ್ ಉಮರ್(ರ)ರ ಕಾಲದವರೆಗೂ ಜೀವಂತವಾಗಿತ್ತು ಎಂದು ಜಾಬಿರ್(ರ) ಹೇಳುತ್ತಾರೆ.

ಹಝ್ರತ್ ಪೈಗಂಬರ್(ಸ)ರ ಆದರ್ಶ, ತರಬೇತಿ ಮತ್ತು ಪರಿಶುದ್ಧ ಆತ್ಮದ ಪ್ರಭಾವವು ಎಲ್ಲ ಸಹಾಬಿಯರ ಮೇಲಿತ್ತು. ಹಝ್ರತ್ ಖದೀಜ(ರ)ರ ಮೇಲೂ ಈ ಪ್ರಭಾವವಿತ್ತು ಮತ್ತು ಇದೇ ಕಾರಣದಿಂದಾಗಿ ಅವರು ಯಾವುದೇ ಕೊರತೆಯ ಭಯವಿಲ್ಲದೆ ತಮ್ಮ ಸಂಪತ್ತನ್ನು ಹಝ್ರತ್ ಪೈಗಂಬರ್(ಸ)ರಿಗೆ ಒಪ್ಪಿಸಿಬಿಟ್ಟರು. ಹೀಗೆ ವರದಿಯಾಗಿದೆ: ರಸೂಲುಲ್ಲಾಹ್(ಸ) ಹಝ್ರತ್ ಖದೀಜ(ರ)ರ ಬಳಿಗೆ ಬಂದಾಗ ಸ್ವಲ್ಪ ಚಿಂತಿತರಾಗಿದ್ದರು. 'ಏನಾಯಿತು?' ಎಂದು ಅವರೊಡನೆ ಹಝ್ರತ್ ಖದೀಜ(ರ) ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಇದು ಬರಗಾಲವಾಗಿದೆ, ಒಂದು ವೇಳೆ ನಾನು ಸಂಪತ್ತನ್ನು ಖರ್ಚು ಮಾಡಿದರೆ ನಿನ್ನ ಸಂಪತ್ತು ಮುಗಿದುಹೋಗುವುದು ಎಂದು ಯೋಚಿಸಿ ನಿನ್ನೊಡನೆ ಕೇಳಲು ನನಗೆ ನಾಚಿಕೆಯಾಗುತ್ತಿದೆ; ಆದರೆ ನಾನು ಅದನ್ನು ಖರ್ಚು ಮಾಡದೇ ಇರುವುದರಿಂದ ನಾನು ಅಲ್ಲಾಹನಿಗೆ ಹೆದರುತ್ತೇನೆ.' ಹಝ್ರತ್ ಅಬೂಬಕರ್(ರ) ವಿವರಿಸುತ್ತಾರೆ: ಖದೀಜ(ರ) ದೀನಾರ್‌ಗಳನ್ನು ಹೊರತೆಗೆದು ಅವುಗಳ ದೊಡ್ಡ ರಾಶಿಯನ್ನೇ ಹಾಕಿದರು, ಬಹಳಷ್ಟು ಸಂಪತ್ತಿನ ಕಾರಣದಿಂದಾಗಿ ನನ್ನ ಎದುರಿಗೆ ಯಾರು ಕುಳಿತಿದ್ದಾರೆ ಎಂಬುದನ್ನು ಕೂಡ ನೋಡಲು ನನಗೆ ಸಾಧ್ಯವಾಗುತ್ತಿರಲಿಲ್ಲ. ಅನಂತರ ಹಝ್ರತ್ ಖದೀಜ(ರ) ಹೇಳಿದರು: 'ನೀವು ಸಾಕ್ಷಿಯಾಗಿರಿ, ಈ ಎಲ್ಲ ಸಂಪತ್ತು ಹಝ್ರತ್ ಪೈಗಂಬರ್(ಸ)ರದ್ದಾಗಿದೆ; ಅವರು ಬಯಸುವುದಾದರೆ ಇದನ್ನು ಖರ್ಚು ಮಾಡಲಿ ಅಥವಾ ತಮ್ಮ ಬಳಿಯೇ ಇಟ್ಟುಕೊಳ್ಳಲಿ'. ಹಝ್ರತ್ ಪೈಗಂಬರ್(ಸ)ರ ಚಿಂತೆಯನ್ನು ದೂರ ಮಾಡುವ ಸಲುವಾಗಿ, 'ಸರಿ, ನೀವು ಖರ್ಚು ಮಾಡಿ' ಎಂದು ಅವರು ತಮ್ಮ ಸಂಪತ್ತನ್ನು ಕೊಟ್ಟುಬಿಟ್ಟರು.

ಒಮ್ಮೆ ಒಬ್ಬ ವ್ಯಕ್ತಿಯು ಹಝ್ರತ್ ಪೈಗಂಬರ್(ಸ)ರ ಬಳಿ ಬಂದು ಏನಾದರೂ ಕೊಡಿ ಎಂದು ಬೇಡಿದನು. ಹಝ್ರತ್ ಪೈಗಂಬರ್(ಸ) ಹೇಳಿದರು: 'ನನ್ನ ಬಳಿ ಈಗ ಏನೂ ಇಲ್ಲ. ನೀನು ನನ್ನ ಹೆಸರಿನಲ್ಲಿ ವಸ್ತುಗಳನ್ನು ಖರೀದಿ ಮಾಡು, ನನ್ನ ಬಳಿ ಏನಾದರೂ ಬರುವಾಗ ನಾನು ಅದರ ಬೆಲೆಯನ್ನು ಪಾವತಿಸುತ್ತೇನೆ.' ಹಝ್ರತ್ ಉಮರ್(ರ) ಹೇಳಿದರು: 'ಯಾ ರಸೂಲಲ್ಲಾಹ್(ಸ), ನೀವು ಇವನಿಗೆ ಮೊದಲೇ ನೀಡಿದ್ದೀರಿ, ಯಾವುದು ನಿಮ್ಮ ಶಕ್ತಿಯಲ್ಲಿಲ್ಲವೋ ಅಲ್ಲಾಹನು ನಿಮ್ಮನ್ನು ಅದಕ್ಕೆ ಜವಾಬ್ದಾರನನ್ನಾಗಿ ಮಾಡಿಲ್ಲ'. ಹಝ್ರತ್ ಪೈಗಂಬರ್(ಸ)ರಿಗೆ ಹಝ್ರತ್ ಉಮರ್(ರ)ರ ಈ ಮಾತು ಇಷ್ಟವಾಗಲಿಲ್ಲ. ಅನ್ಸಾರ್‌ರ ಪೈಕಿ ಒಬ್ಬ ವ್ಯಕ್ತಿ ಹೀಗೆ ಹೇಳಿದನು: 'ಯಾ ರಸೂಲಲ್ಲಾಹ್(ಸ), ನೀವು ಖರ್ಚು ಮಾಡಿರಿ; ಸಿಂಹಾಸನದ ಒಡೆಯನಾದ ಅಲ್ಲಾಹನು ಇರುವಾಗ ಬಡತನದ ಬಗ್ಗೆ ಭಯಪಡಬೇಡಿ.' ಅನ್ಸಾರಿಯ ಈ ಮಾತನ್ನು ಕೇಳಿ ಹಝ್ರತ್ ಪೈಗಂಬರ್(ಸ) ಮುಗುಳ್ನಕ್ಕರು ಮತ್ತು ಅವರ ಮುಖದಲ್ಲಿ ಸಂತೋಷವು ಗೋಚರಿಸುತ್ತಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಹೀಗೆ ಮಾಡಲು ನನಗೆ ಆಜ್ಞಾಪಿಸಲಾಗಿದೆ.'

ಹಝ್ರತ್ ಪೈಗಂಬರ್(ಸ)ರಿಗೆ ಒಬ್ಬ ಸಹಾಬಿ(ರ) ಖರ್ಜೂರಗಳು ಮತ್ತು ಸೌತೆಕಾಯಿಗಳನ್ನು ಉಡುಗೊರೆಯಾಗಿ ನೀಡಿದರು. ಅದೇ ವೇಳೆ ಹಝ್ರತ್ ಪೈಗಂಬರ್(ಸ)ರ ಬಳಿ ಬಹ್ರೈನ್‌ನಿಂದ ಚಿನ್ನದ ಆಭರಣಗಳು ಬಂದವು. ಹಝ್ರತ್ ಪೈಗಂಬರ್(ಸ) ಆ ಖರ್ಜೂರಗಳು ಮತ್ತು ಸೌತೆಕಾಯಿಗಳಿಗೆ ಪ್ರತಿಯಾಗಿ ಹಿಡಿ ತುಂಬ ಆಭರಣಗಳನ್ನು ಆ ಸಹಾಬಿಗೆ ನೀಡಿದರು.

ಯಾರಾದರೂ ಸಾಲದಲ್ಲಿದ್ದ ಸ್ಥಿತಿಯಲ್ಲಿ ನಿಧನರಾದರೆ ಮತ್ತು ಆ ಸಾಲದ ಪಾವತಿಗಾಗಿ ಯಾವುದೇ ಸಂಪತ್ತನ್ನು ಬಿಟ್ಟು ಹೋಗದಿದ್ದರೆ, ಹಝ್ರತ್ ಪೈಗಂಬರ್(ಸ) ಮುಸ್ಲಿಮರೊಡನೆ ಹೀಗೆ ಹೇಳುತ್ತಿದ್ದರು: 'ನೀವು ನಿಮ್ಮ ಸಹೋದರನ ಜನಾಝ ನಮಾಝ್ ನಿರ್ವಹಿಸಿರಿ'. ನಾನು ಮುಸ್ಲಿಮರಿಗೆ ಅವರ ರಕ್ತಸಂಬಂಧಿಗಳಿಗಿಂತಲೂ ಹೆಚ್ಚು ಹತ್ತಿರದವನಾಗಿದ್ದೇನೆ. ಆದ್ದರಿಂದ ಸತ್ಯವಿಶ್ವಾಸಿಗಳ ಪೈಕಿ ಯಾರಾದರೂ ನಿಧನರಾಗುವಾಗ ಸಾಲವನ್ನು ಬಿಟ್ಟು ಹೋದರೆ, ಅದನ್ನು ತೀರಿಸುವ ಜವಾಬ್ದಾರಿ ನನ್ನದಾಗಿದೆ; ಅವರು ಬಿಟ್ಟು ಹೋಗುವ ಸಂಪತ್ತು ಅವರ ವಾರಸುದಾರರಿಗೆ ಸೇರಿದ್ದಾಗಿದೆ.'

(ಹಝ್ರತ್ ಪೈಗಂಬರ್(ಸ)ರ ಸಾಲದ ಮರುಪಾವತಿಗೆ ಸಂಬಂಧಿಸಿದಂತೆ ಹಝ್ರತ್ ಬಿಲಾಲ್(ರ)ರ ವಿವರವಾದ ವರದಿಯನ್ನು ಹುಝೂರ್ ಪ್ರಸ್ತುತಪಡಿಸಿದರು. ಅದರಲ್ಲಿ ಅಲ್ಲಾಹನು ಅಸಾಮಾನ್ಯ ರೀತಿಯಲ್ಲಿ ಸಾಲ ಪಾವತಿಯ ವ್ಯವಸ್ಥೆಯನ್ನು ಮಾಡಿದ ಬಗ್ಗೆ ಪ್ರಸ್ತಾಪವಿತ್ತು.) ಸಾಲವೆಲ್ಲವೂ ತೀರಿದಾಗ ರಸೂಲುಲ್ಲಾಹ್(ಸ) ಹೇಳಿದರು: 'ಹೇ ಬಿಲಾಲ್, ಸಾಲ ತೀರಿದ ನಂತರ ಉಳಿದಿರುವ ಸಂಪತ್ತನ್ನು ಬಡವರ ಮೇಲೆ ಖರ್ಚು ಮಾಡು'. ಹಝ್ರತ್ ಪೈಗಂಬರ್(ಸ) ಆ ರಾತ್ರಿಯನ್ನು ಮಸೀದಿಯಲ್ಲಿಯೇ ಕಳೆದರು; ಮನೆಗೆ ತೆರಳಲಿಲ್ಲ. ಮರುದಿನ ವಿಚಾರಿಸಿದಾಗ, ಎಲ್ಲ ಸಂಪತ್ತೂ ಖರ್ಚಾಗಿದೆ ಎಂದು ಬಿಲಾಲ್(ರ) ತಿಳಿಸಿದರು; ಆಗ ಹಝ್ರತ್ ಪೈಗಂಬರ್(ಸ) ಅಲ್ಲಾಹನ ಮಹಿಮೆ ಮತ್ತು ಪ್ರಶಂಸೆಯನ್ನು ಕೊಂಡಾಡಿದರು ಹಾಗೂ ತಮ್ಮ ಪತ್ನಿಯರ ಬಳಿಗೆ ತೆರಳಿದರು.

ಹಝ್ರತ್ ಇಬ್ನು ಉಮರ್(ರ) ವಿವರಿಸುತ್ತಾರೆ: ಹಝ್ರತ್ ಜುಬೈರ್(ರ)ರಿಗೆ ಅವರ ಕುದುರೆ ಎಲ್ಲಿಯವರೆಗೆ ಓಡುತ್ತದೆಯೋ ಅಲ್ಲಿಯವರೆಗೆ ಇರುವ ಭೂಸ್ವತ್ತನ್ನು ನೀಡಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು. ಕುದುರೆಯು ಓಡಿ ನಿಂತಾಗ ಜುಬೈರ್(ರ) ತಮ್ಮ ಚಾವಟಿಯನ್ನು ಎಸೆದರು, ಅದು ದೂರದ ತನಕ ಹೋಯಿತು. ರಸೂಲುಲ್ಲಾಹ್(ಸ) ಹೇಳಿದರು: 'ಅವರ ಚಾವಟಿ ಎಲ್ಲಿಯವರೆಗೆ ಹೋಗಿದೆಯೋ ಅಲ್ಲಿಯವರೆಗೆ ಅವರಿಗೆ ಭೂಮಿಯನ್ನು ನೀಡಿ'

ಹಝ್ರತ್ ಮಸೀಹ್ ಮೌಊದ್(ಅ) ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ಒಮ್ಮೆ ತಮ್ಮ ಮನೆಗೆ ಬಂದು, 'ನಮ್ಮ ಮನೆಯಲ್ಲಿ ಏನಿದೆ?' ಎಂದು ಕೇಳಿದರು. ಹಝ್ರತ್ ಆಯಿಶ(ರ) ಎರಡು ಚಿನ್ನದ ನಾಣ್ಯಗಳನ್ನು ಹೊರತೆಗೆದು 'ಇಷ್ಟೇ ಇರುವುದು' ಎಂದರು. ಹಝ್ರತ್ ಪೈಗಂಬರ್(ಸ) ಅವುಗಳನ್ನು ತಮ್ಮ ಅಂಗೈಯಲ್ಲಿಟ್ಟುಕೊಂಡು, 'ತನ್ನ ಹಿಂದೆ ಎರಡು ಚಿನ್ನದ ನಾಣ್ಯಗಳನ್ನು ಬಿಟ್ಟು ಹೋಗುವ ಆ ಪ್ರವಾದಿಯ ಸ್ಥಿತಿ ಏನಾಗಬಹುದು?' ಎಂದು ಹೇಳಿ ಅದೇ ಕ್ಷಣದಲ್ಲಿ ಆ ನಾಣ್ಯಗಳನ್ನು ಹಂಚಿಬಿಟ್ಟರು.

ಹುನೈನ್ ಯುದ್ಧದಲ್ಲಿ ಆರು ಸಾವಿರ ಅಥವಾ ಎಂಟು ಸಾವಿರ ದಾಸಿಯರು ಮತ್ತು ಗುಲಾಮರು, ಇಪ್ಪತ್ನಾಲ್ಕು ಸಾವಿರ ಒಂಟೆಗಳು ಮತ್ತು ನಲವತ್ತು ಸಾವಿರಕ್ಕೂ ಹೆಚ್ಚು ಕುರಿ–ಮೇಕೆಗಳು, ನಾನೂರ ತೊಂಬತ್ತು ಕಿಲೋಗ್ರಾಂ ಬೆಳ್ಳಿ ಯುದ್ಧ ಸಂಪತ್ತಾಗಿ ಲಭಿಸಿತು. ಹಝ್ರತ್ ಪೈಗಂಬರ್(ಸ) ಯುದ್ಧ ಸಂಪತ್ತಿನ ಹಂಚಿಕೆಯನ್ನು ಉದಾರ ಮನಸ್ಸಿನಿಂದ ಗೋತ್ರ ನೇತಾರರ ಮಧ್ಯೆ ಹಂಚಲು ಪ್ರಾರಂಭಿಸಿದರು. ಅವರು ಅರಬರ ದೊಡ್ಡ ಮುಖಂಡರಾಗಿದ್ದರು ಮತ್ತು ತಮ್ಮ ತಮ್ಮ ಗೋತ್ರಗಳಲ್ಲಿ ಗೌರವ ಹಾಗೂ ಹಿರಿಮೆಯ ಸ್ಥಾನವನ್ನು ಹೊಂದಿದ್ದರು. ಇಸ್ಲಾಮಿನ ಬಗ್ಗೆ ಒಲವು ಮೂಡುವಂತೆ ಮಾಡಲು ಹಝ್ರತ್ ಪೈಗಂಬರ್(ಸ) ಅವರಿಗೆ ಸಂಪತ್ತನ್ನು ನೀಡಿದರು.

ಹಝ್ರತ್ ಪೈಗಂಬರ್(ಸ) ಈ ಸಂದರ್ಭದಲ್ಲಿ ಅಬೂಸುಫ್ಯಾನ್ ಮತ್ತು ಅವರ ಪುತ್ರರಿಗೆ ಎಷ್ಟೊಂದು ಸಂಪತ್ತನ್ನು ನೀಡಿದರೆಂದರೆ ಅಬೂಸುಫ್ಯಾನ್ ಹೀಗೆ ಹೇಳಿದರು: 'ಯಾ ರಸೂಲಲ್ಲಾಹ್(ಸ), ನೀವು ಅತ್ಯಂತ ದಯಾಳು. ನನ್ನ ತಂದೆ–ತಾಯಿ ನಿಮ್ಮ ಮೇಲೆ ಅರ್ಪಿತವಾಗಲಿ. ನಾನು ನಿಮ್ಮೊಂದಿಗೆ ಯುದ್ಧಗಳನ್ನು ಮಾಡಿದ್ದೇನೆ; ನೀವು ಎಂತಹ ಶ್ರೇಷ್ಠ ಯೋಧರಾಗಿದ್ದೀರಿ. ನಾನು ನಿಮ್ಮೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡಿದ್ದೇನೆ; ನೀವು ಎಂತಹ ಶ್ರೇಷ್ಠ ಶಾಂತಿಪ್ರಿಯರಾಗಿದ್ದೀರಿ.'

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಬಳಿ ಒಮ್ಮೆ ಬಹಳಷ್ಟು ಕುರಿ–ಮೇಕೆಗಳಿದ್ದವು. 'ರೋಮ್ ಮತ್ತು ಇರಾನಿನ ಅರಸರ ಬಳಿ ಇರುವುದಕ್ಕಿಂತಲೂ ಹೆಚ್ಚು ಕುರಿ–ಮೇಕೆಗಳು ನಿಮ್ಮ ಬಳಿ ಇವೆ' ಎಂದು ಒಬ್ಬ ಕಾಫಿರನು ಹೇಳಿದನು. ಹಝ್ರತ್ ಪೈಗಂಬರ್(ಸ) ಅದೇ ಕ್ಷಣದಲ್ಲಿ ಅವೆಲ್ಲವನ್ನೂ ಅವನಿಗೆ ದಾನ ಮಾಡಿದರು, ಅವನು ತಕ್ಷಣವೇ ಸತ್ಯವಿಶ್ವಾಸ ಕೈಗೊಂಡನು ಮತ್ತು ಹೀಗೆ ಹೇಳಿದನು: 'ಪ್ರವಾದಿಯ ಹೊರತು ಯಾರೂ ಇಷ್ಟು ಹೆಚ್ಚು ದಾನಶೀಲತೆಯನ್ನು ತೋರಲು ಸಾಧ್ಯವಿಲ್ಲ' ಎಂದು ಹೇಳಿದನು.

ಹುನೈನ್ ಯುದ್ಧದ ದಿನದಂದು ಒಬ್ಬ ಮಹಿಳೆ ಬಂದು ಕೆಲವು ಕವನಗಳನ್ನು ಪಠಿಸಿದಳು. ಅದರಲ್ಲಿ ಬನೂ ಹವಾಝಿನ್ ಗೋತ್ರದಲ್ಲಿ ಹಝ್ರತ್ ಪೈಗಂಬರ್(ಸ)ರ ಬಾಲ್ಯದ ಸ್ತನ್ಯಪಾನದ ದಿನಗಳ ಉಲ್ಲೇಖವಿತ್ತು. ಹಝ್ರತ್ ಪೈಗಂಬರ್(ಸ) ಈ ಕವನಗಳನ್ನು ಕೇಳಿ ಬನೂ ಹವಾಝಿನ್‌ನ ಎಲ್ಲ ಸಂಪತ್ತನ್ನು ಅವರಿಗೆ ಹಿಂತಿರುಗಿಸಿದರು. ಮಾತ್ರವಲ್ಲ, ಅವರಿಗೆ ಇನ್ನೂ ಹೆಚ್ಚಿನ ಸಂಪತ್ತನ್ನು ನೀಡಿದರು, ಅದರ ಮೌಲ್ಯವು ಐದು ಲಕ್ಷ ದಿರ್ಹಮ್‌ಗಳಿಗೆ ಸಮನಾಗಿತ್ತು.

ಹಝ್ರತ್ ಪೈಗಂಬರ್(ಸ)ರ ಉನ್ನತ ನೈತಿಕತೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ)ರಲ್ಲಿ ಪರಿಪೂರ್ಣ ಮಟ್ಟದ ಸಮತೋಲನವು ಕಂಡುಬರುತ್ತಿತ್ತು. ಅವರ ಪ್ರತಿಯೊಂದು ನೈತಿಕ ಗುಣವೂ ಅದರದೇ ಆದ ಸಂದರ್ಭ ಮತ್ತು ಸಮಯದಲ್ಲಿ ಪ್ರಕಟವಾಗುತ್ತಿತ್ತು; ಆ ಉನ್ನತ ನೈತಿಕ ಗುಣಗಳಲ್ಲಿ ಹಝ್ರತ್ ಪೈಗಂಬರ್(ಸ)ರ ದಾನಶೀಲತೆಯೂ ಸಂದರ್ಭೋಚಿತವಾಗಿಯೇ ಇರುತ್ತಿತ್ತು, ತ್ಯಾಗಗುಣವೂ ಸೂಕ್ತ ಸಂದರ್ಭದಲ್ಲೇ ಇರುತ್ತಿತ್ತು ಹಾಗೂ ಔದಾರ್ಯವೂ ಸೂಕ್ತ ಸಂದರ್ಭದಲ್ಲೇ ಇರುತ್ತಿತ್ತು.

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ)ರ ಬೋಧನೆಯು ಹೇಗೆ ಸಮತೋಲಿತವಾಗಿದೆಯೋ, ಅದೇ ರೀತಿ ಹಝ್ರತ್ ಪೈಗಂಬರ್(ಸ)ರ ಪ್ರತಿಯೊಂದು ಕಾರ್ಯವೂ ಅದಕ್ಕೆ ಅನುಗುಣವಾಗಿ ಸಮತೋಲಿತವಾಗಿತ್ತು. ಅಲ್ಲಾಹನು ನಮಗೆ ಹಝ್ರತ್ ಪೈಗಂಬರ್(ಸ)ರ ಪವಿತ್ರ ಜೀವನದ ಪ್ರತಿಯೊಂದು ಆಯಾಮದ ಬಗ್ಗೆ ಯೋಚಿಸಲು ಮತ್ತು ಪಾಲಿಸಲು ಸೌಭಾಗ್ಯ ದಯಪಾಲಿಸಲಿ.

————————————*****————————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

At, ***'Masjid Mubarak',*** *Islamabad, Tilford,* U.K. On 19-06-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian



***Email*:** *khutuba.kannada@gmail.com*



**You can find all the Sermons archived at**: www.alislam.org/friday-sermon